


# ನೀರಿನೊಳಗಿನ ಮಂಜು

ಡಾ. ನಾ. ಮೊಗಸಾಲೆ
ಕಲೆ: ಮನೋಹರ ಕೆ. ಆಚಾರ್ಯ

## ನೆನಪು ಹೊರಳುವವು ವಸಂತನ ಕಡೆಗೆ...

ರಾಯರು ಮಾತನಾಡಲಿಲ್ಲ. ಸುಮ್ಮನೆ ನಸುನಕ್ಕರು. ಅಷ್ಟರಲ್ಲಿ ರಾಯರ ಜೊತೆಗೆ ಬಂದಿದ್ದ ಸದಾಶಿವಶೆಟ್ಟರು 'ನಮ್ಮ ರಾಯರಿಗೆ ಹಳ್ಳಿಗೆ ಬರಲು ಮನಸ್ಸಿರಲಿಲ್ಲ ಸರ್, ನಿವೃತ್ತರಾದ ತಕ್ಷಣ ಅವರಿಗೆ ಇನ್ನೊಂದು ಕಾಲೇಜಿನಿಂದ ಪ್ರಾಂಶುಪಾಲರಾಗಲು ಆಹ್ವಾನ ಬಂದಿದ್ದರೂ, ಅವರ ಮೇಡಂ ಅವರಿಗೆ ರಾಂಪುರವು ದೈಹಿಕವಾಗಿಯೂ ಮಾನಸಿಕವಾಗಿಯೂ ಅಲರ್ಜಿ ಎಂಬಂತಾಗಿ ತೀವ್ರವಾದ ಆಸ್ತಮಾ ಬಾಧಿಸತೊಡಗಿತ್ತು. ಅದು ರಾಂಪುರವನ್ನು ಬಿಟ್ಟರೆ ಬರಲಾರದು ಎಂಬ ನಿರೀಕ್ಷೆ ಮೇಡಂ ಅವರದ್ದಾಗಿದ್ದು, ಈಗ ಅದು ನಿಜವೇ ಆಗಿದೆ' ಎಂದರು.

'ಹೌದಾ?' ಎಂದು ಮುಗುಳುನಕ್ಕ ಎಸ್.ಐ. ಸಾಹೇಬರು 'ಸೈನ್ಸ್ ಎಷ್ಟೇ ಮುಂದುವರಿದರೂ ನಮ್ಮ ದೇಹದ ಮೇಲೆ ಮನಸ್ಸಿನ ಪರಿಣಾಮ ಹೇಗಿರುತ್ತದೆ ಎನ್ನುವುದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲು ನಮಗೆ ಇನ್ನೂ ಆಗಿಲ್ಲ' ಎಂದರು.

ಅಷ್ಟರಲ್ಲಿ ಗ್ರೀನ್ ಟೀ ಬಂತು. ಎಸ್.ಐ. ಸಾಹೇಬರು 'ಸರ್ ಪ್ಲೀಸ್' ಎಂದು ಅತಿಥಿಗಳಿಗೆ ಮನವಿ ಮಾಡಿದರು. ಆಮೇಲೆ ಅವರು ಮುಜುಗರದಲ್ಲೇ 'ಈಗ ನೀವು ಏನು ಬಂದಿದ್ದು ಎಂದು ಕೇಳುವ ಮೊದಲು ನನ್ನ ಕುತೂಹಲಕ್ಕೆ ಒಂದು ಕ್ಲಾರಿಫಿಕೇಶನ್ ಬೇಕಿದೆ ಸರ್. ಇಫ್ ಯು ಡೋಂಟ್ ಮೈಂಡ್, ನೀವು ಕುಂದಾಪುರದ ಬಂಡಸಾಲೆ ರಾಮಣ್ಣ ಶೆಟ್ಟರ ಮಗಳನ್ನು ಪ್ರೀತಿಸುತ್ತಿದ್ದೀರಿ ಎಂಬ ಕಾರಣಕ್ಕೆ ಗೋವಿಂದಪ್ಪ ಕಾಲೇಜು ಬಿಟ್ಟು ಹೋಗುವಂತೆ ಆಯ್ತು ಅಂತ ಆ ದಿನಗಳಲ್ಲಿ ನಾನು ಕೇಳಿದ್ದೆ. ಸುಮ್ಮನೆ ಕೇಳುತ್ತಿದ್ದೇನೆ ಅಂತ ನೊಂದುಕೊಳ್ಳಬೇಡಿ. ಈಸ್ ಇಟ್ ಟ್ರೂ ಸರ್?' ಎಂದು ಪ್ರಶ್ನಿಸಿದರು.

'ಹೌದಯ್ಯ ಹೌದು' ಎಂದು ನಕ್ಕ ರಾಯರು, 'ಸರೋಜ ನಿಮ್ಮ ಜೂನಿಯರ್ ಅಂತ ಕಾಣುತ್ತದೆ' ಎಂದವರೇ 'ಅವಳದ್ದೂ ನನ್ನದೂ ಪ್ರೇಮ ಪ್ರಕರಣ ನಡೆದದ್ದು ನಿಜ!' ಎನ್ನುತ್ತಾ – 'ಅದೆಲ್ಲ ಆಗ ದೊಡ್ಡ ರಾದ್ಧಾಂತ ಆಗಿತ್ತು ಮಾರಾಯ' ಎಂದು ಮಾತು ನಿಲ್ಲಿಸಿದರು. ಆಮೇಲೆ 'ಈ ವಿಷಯವು ಮುಂದೆ ಕಾಲೇಜನ್ನು ನಡೆಸುವ ಟ್ರಸ್ಟಿನ ತನಕವೂ ಹೋಗಿ ಟ್ರಸ್ಟಿನ ಅಧ್ಯಕ್ಷರು ನನ್ನನ್ನು ಕರೆಸಿ, 'ಹೀಗಂತೆ ಅಲ್ವ ಮಿ. ರಾವ್, ಇದು ನಮ್ಮ ಕಾಲೇಜಿಗೆ ಕೆಟ್ಟ ಹೆಸರು ತರುತ್ತದೆ' ಎಂದು ಅಸಮಾಧಾನ ತೋಡಿಕೊಳ್ಳುವ ತನಕ ಹೋಯಿತು. ಆಗ ನಾನು ಸರೋಜಳಿಗೆ ಏನು ಹೇಳಿದ್ದೆನೋ ಆ ಮಾತನ್ನೇ ಟ್ರಸ್ಟಿನ ಅಧ್ಯಕ್ಷರಲ್ಲೂ ಪುನರುಚ್ಚರಿಸಿದೆ. ಅಷ್ಟೇ ಅಲ್ಲ, ಯಾವ ಕಾರಣಕ್ಕೂ ನಾನು ಇದರಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದೆ. ಕಾಲೇಜ್ ಟ್ರಸ್ಟಿನ ಘನಸ್ಥಿಕೆಗೆ ಇದರಿಂದ ಕುಂದುಬರುವುದಾದರೆ ನಾನು ನನ್ನ ರಾಜೀನಾಮೆ ಪತ್ರ ತಂದಿದ್ದೇನೆ. ದಯವಿಟ್ಟು ತೆಗೆದುಕೊಳ್ಳಿ' ಎಂದೂ ಆಡಿದೆ. ಆಗ ಟ್ರಸ್ಟಿನ ಅಧ್ಯಕ್ಷರು ಗಂಭೀರವಾಗಿ 'ತುಂಬ ಭವಿಷ್ಯ ಇರುವ ಲೆಕ್ಚರರ್ ನೀವು. ನಮ್ಮ ಕಾಲೇಜಿನ ಇಡೀ ಸ್ಟಾಫೇ ನಿಮ್ಮ ಪಾಠಗಳ ಬಗ್ಗೆ ಮತ್ತು ನಡತೆಯ ಬಗ್ಗೆ ಒಳ್ಳೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಾಲೇಜಿನ ಪ್ರಾಂಶುಪಾಲರೂ ಸೇರಿದಂತೆ ಬಹುತೇಕ ಮಂದಿಯನ್ನು ನಾನು ಖಾಸಗಿಯಾಗಿ ಕರೆಸಿ ಕೇಳಿದೆ. ಅವರೆಲ್ಲ 'ಹಿ ಈಸ್ ಗುಡ್ ಏಂಡ್ ಟ್ಯಾಲೆಂಟೆಂಡ್' ಎಂದರೇ ವಿನಾ, ತಪ್ಪಿಯೂ ನಿಮ್ಮ ಬಗ್ಗೆ ನೆಗೆಟಿವ್ ಹೇಳಿದವರಿಲ್ಲ! ಓಕೆ! ರಾಜಿನಾಮೆ ಕೊಟ್ಟು ಮುಂದೇನು ಮಾಡುತ್ತೀರಿ?' ಎಂದು ಪ್ರಶ್ನಿಸಿದ ಅವರು, 'ನಾನು ಅದನ್ನು ಕೇಳಬಹುದಾದರೆ, ಹೇಳಿ' ಎಂದಿದ್ದರು.

ನಾನು ಅವರಿಗೆ 'ಬೇರೆ ಕಡೆ ಕೆಲಸಕ್ಕೆ ಸೇರಲು ನಿರ್ಧರಿಸಿದ್ದೇನೆ, ಸರ್. ಬಟ್, ಎಲ್ಲಿ ಏನು ಎನ್ನುವುದು ಇನ್ನೂ ನಿಶ್ಚಯವಾಗಿಲ್ಲ. ರಾಂಪುರದ ಬಸವರಾಜೇಶ್ವರ ಕಾಲೇಜಿಗೆ ಇಂಗ್ಲಿಷ್ ಲೆಕ್ಚರರ್ ಬೇಕು ಅಂತ ಪ್ರಕಟಣೆ ಬಂದಿದೆ ಎಂದು ನಮ್ಮ